ಹೊಸ ವಿಶ್ವವಿದ್ಯಾನಿಲಯಗಳು

627ಎ - ಶ್ರೀ ಎಸ್. ಶಫೀ ಅಹಮದ್ (ತುಮಕೂರು) : ಮಾನ್ಯ ಉನ್ನತಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸ ವಿಶ್ವವಿದ್ಯಾಲಯ (ಬೆಂಗಳೂರು ಗ್ರಾಮಾಂತರ ವಿಶ್ವವಿದ್ಯಾಲಯ)ವನ್ನು ಪ್ರಾರಂಭಿಸುವ ಪ್ರಸ್ತಾವನೆಯೇನಾದರೂ ಇದೆಯೇ?

ಆ) ಹಾಗಿದ್ದಲ್ಲಿ, ಕೋಲಾರ, ಬೆಂಗಳೂರು ಗ್ರಾಮಾಂತರ ಮತ್ತು ತುಮಕೂರಿನ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೊಸ ವಿಶ್ವವಿದ್ಯಾಲಯ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು? ಮತ್ತು ಅದನ್ನು ಯಾವಾಗ ಪ್ರಾರಂಭಿಸಲಾಗುತ್ತದೆ?

ಶ್ರೀ ಎಸ್. ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ನಂಜನಗೂಡು ತಾಲ್ಲೂಕಿನಲ್ಲಿ ಆನೆಗಳ ಕಾಟ

576 - ಶ್ರೀ ಎಂ. ಮಹದೇವು (ನಂಜನಗೂಡು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂಜನಗೂಡು ತಾಲ್ಲೂಕಿನ ನಾಗನಪುರ ಹರಜೀಪುರ, ಮಡುವಿನಹಳ್ಳಿ, ಕೊತ್ತೆನಹಳ್ಳಿ ಇತರೆ ಸುತ್ತಮುತ್ತಲ ಗ್ರಾಮಗಳಲ್ಲಿ ಆನೆಗಳ ಕಾಟದಿಂದ ಜನರಿಗೆ ಫಸಲು ನಷ್ಟವಾಗಿ ಭಯಗ್ರಸ್ಥ ಸ್ಥಿತಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು? ಕಾಡಾನೆಗಳ ಕಾಟ ತಪ್ಪಿಸಲು ವಿಶೇಷ ಅರಣ್ಯ ಸಿಬ್ಬಂದಿ ನೇಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? ಮಾಡಿದ್ದಲ್ಲಿ ಫಸಲು ಉಳಿಸಲು ಅತಿ ಶೀಘ್ರದಲ್ಲಿ ಕ್ರಮ ಕೈಗೊಳ್ಳುವುದೇ? ನಷ್ಟಕ್ಕೆ ಪರಿಹಾರ ಒದಗಿಸಿದೆಯೇ? ಮತ್ತು ಈ ಬಗ್ಗೆ ಎಷ್ಟು ದೂರುಗಳು ಬಂದಿವೆ. ಈ ಬಗ್ಗೆ ಅರಣ್ಯ ಸಂರಕ್ಷಣಾಧಿಕಾರಿಯವರು ಎಷ್ಟು ಬಾರಿ ಭೇಟಿ ನೀಡಿ ಪರಿಶೀಲನೆ ನಡೆಸಿ ಕಾಡಾನೆ ಹಾವಳಿ ತಪ್ಪಿಸಲು ಯಾವ ಕ್ರಮ ಕೈಗೊಂಡಿದ್ದಾರೆ. ಮತ್ತು ಒದಗಿಸಿರುವ ಪರಿಹಾರದ ಮೊತ್ತವೆಷ್ಟು?

ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಸಚಿವರು) :

ಅ)

(1) ಬಂದಿದೆ.

(2) ಕಾಡಾನೆಗಳನ್ನು ಸ್ಥಳೀಯ ಜನರೊಂದಿಗೆ ಸ್ಥಳೀಯ ರಕ್ಷಣಾ ಸಿಬ್ಬಂದಿ ತಕ್ಷಣವೇ ಕಾರ್ಯ ಪ್ರವೃತ್ತರಾಗಿ, ಪಟಾಕಿ ಸಿಡಿಸಿ, ತಮಟೆ ಬಾರಿಸಿ, ಕಾಡಿಗೆ ಹಿಂದಕ್ಕಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ.

(3) ವಿಶೇಷ ಸಿಬ್ಬಂದಿಯನ್ನು ದಿನಗೂಲಿ ಆಧಾರದ ಮೇಲೆ ನೇಮಿಸಿಕೊಳ್ಳಲಾಗುತ್ತಿದೆ.

(4) 3ರಲ್ಲಿ ತಿಳಿಸಿರುವಂತೆ ಬೇರೆ ಕ್ರಮ ಉದ್ಭವಿಸುವುದಿಲ್ಲ.

(5) ಬೆಳೆನಾಶದ ಪ್ರಕರಣಗಳ ಅರ್ಜಿಗಳು ಬಂದ ತಕ್ಷಣ ಕಾನೂನು ರೀತ್ಯ ಪರಿಶೀಲಿಸಿ, ಪರಿಹಾರ ನೀಡಲಾಗುತ್ತಿದೆ.

(6) 1-4-94ರಿಂದ ಈವರೆಗೆ 169 ಬೆಳೆನಾಶದ ಅರ್ಜಿಗಳು, 121 ಜಾನುವಾರು ನಷ್ಟದ ಅರ್ಜಿಗಳು, 2 ಮಾನವ ಹತ್ಯೆಯ ಅರ್ಜಿಗಳು ಬಂದಿರುತ್ತದೆ.

(7) ಅರಣ್ಯ ಸಂರಕ್ಷಣಾಧಿಕಾರಿಗಳು ಆಗಿಂದಾಗ್ಗೆ ಕಾಡಾನೆ ಹಾವಳಿ ಇರುವ ಸ್ಥಳಗಳಿಗೆ ಭೇಟಿ ನೀಡಿ, ಆನೆಗಳ ಹಾವಳಿ ತಪ್ಪಿಸಲು, ಸ್ಥಳೀಯ ಸಿಬ್ಬಂದಿಗೆ ಸೂಕ್ತ ನಿರ್ದೇಶನ ನೀಡಿ, ಮೇಲ್ವಿಚಾರಣೆ ನಡೆಸುತ್ತಿರುತ್ತಾರೆ.

(8) 1994-1995ನೇ ಸಾಲಿನಲ್ಲಿ ಒದಗಿಸಿರುವ ಪರಿಹಾರ ಧನದ ವಿವರಗಳು:

		ಸಂಖ್ಯೆ	ಮೊತ್ತ
(ಅ)	ಬೆಳೆನಷ್ಟ ಪ್ರಕರಣಗಳು	169	84,605-00
(ಆ)	ಜಾನುವಾರು ಹತ್ಯೆ	121	39,675-00
(ಇ)	ಪ್ರಾಣ ಹಾನಿ	2	50,000-00
(ಈ)	ಖಾಯಂ ಅಂಗವಿಕಲತೆ	2	7,700-00

ಮುಳಬಾಗಿಲು ತಾಲ್ಲೂಕು ಊರುಕುಂಟೆ ಮಿಟ್ಟೂರು ಗ್ರಾಮದ ಶ್ರೀ ಕೋದಂಡರಾಮ ಪ್ರೌಢಶಾಲೆಗೆ ಅನುದಾನ

566 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಊರುಕುಂಟೆ ಮಿಟ್ಟೂರು ಗ್ರಾಮದ ಶ್ರೀ ಕೋದಂಡರಾಮ ಪ್ರೌಢಶಾಲೆಗೆ ಅನುದಾನ ಮಂಜೂರಾತಿಗಾಗಿ ಕೋಲಾರ ಜಿಲ್ಲಾ ಪಂಚಾಯ್ತಿಯಿಂದ ಸರ್ಕಾರಕ್ಕೆ ಮನವಿ ಬಂದಿರುವುದೇ?

ಆ) ಹಾಗಿದ್ದಲ್ಲಿ ಅನುದಾನ ಮಂಜೂರಾತಿ ನೀಡದಿರಲು ಕಾರಣವೇನು? ಯಾವಾಗ ನೀಡಲಾಗುವುದು?

ಇ) ವಿಳಂಬಕ್ಕೆ ಕಾರಣರಾದವರ ಮೇಲೆ ಕ್ರಮಕೈಗೊಳ್ಳಲಾಗುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ

ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್, ಕೋಲಾರ ಇವರು ಆಯವ್ಯಯದಲ್ಲಿ ಸಾಕಷ್ಟು ಅನುದಾನವಿಲ್ಲದಿರುವುದರಿಂದ ಹೊಸದಾಗಿ ಖಾಸಗಿ ಪ್ರೌಢಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಅವಕಾಶವಿಲ್ಲವೆಂದು ತಿಳಿಸಿದ್ದರು. ನಂತರದಲ್ಲಿ ಮರು ಹೊಂದಾಣಿಕೆಯಿಂದ ಅನುದಾನಕ್ಕೆ ಒಳಪಡಿಸಲು ಆಯವ್ಯಯದಲ್ಲಿ ಅವಕಾಶ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಆದ್ದರಿಂದ ಈಗ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದ್ದು, ಯೋಜನಾ ಇಲಾಖೆ, ಆರ್ಥಿಕ ಇಲಾಖೆಗಳ ಸಹಮತ ಪಡೆದು ಆದೇಶ ಹೊರಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಉದ್ಭವಿಸುವುದಿಲ್ಲ.

ಶೈಕ್ಷಣಿಕ ಪರೀಕ್ಷೆಗಳ ನಂತರ ಅಭ್ಯರ್ಥಿಗಳಿಗೆ ಉತ್ತರ ಪತ್ರಿಕೆಗಳನ್ನು ವೀಕ್ಷಿಸುವ ಕುರಿತು

571 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳ ಮೌಲ್ಯಮಾಪನದ ನಂತರ ಉತ್ತರಪತ್ರಿಕೆಗಳನ್ನು ಅಭ್ಯರ್ಥಿಗಳ ಕೋರಿಕೆ ಮೇರೆಗೆ ಶುಲ್ಕದೊಂದಿಗೆ ಪರೀಕ್ಷಿಸುವ